ಪಬ್ಲಿಕ್ ವರ್ಕ್ಸ್.

ಇನ್ಸ್ತ್ರುಮೆಂಟ್ಸ್.

ತಾರೀಖು 25ನೆ ಮಾರ್ಚ್ 1907.

ನಂ. 265—2130, ಮಾರಿಕನವೆ ಡಿವಿಜ್ ಆಫೀಸಿಯೇಟಿಂಗ್ ಎಗ್ಜಿಕ್ಯೂಟಿವ್ ಇಂಜಿನಿಯರ್, ಮೆ॥ ಹೆಚ್. ಡಿ. ರೈಸ್, ಯವರಿಗೆ, ಸನ್ 1907ನೆ ಫೆಬ್ರವರಿ 24ನೆ ತಾರೀಖಿನಿಂದ ಆತವ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ 2 ತಿಂಗಳು, 5 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿದೆ.

2. ಅಸಿಸ್ಟೆಂಟು ಇಂಜನಿಯರ್ ಮೆ॥ ಕೆ. ಅನಂತಾಚಾರಿಯ್ಯಾ, ಎಲ್. ಸಿ. ಇ. ಯವರು, ಮೆ॥ ರೈಸ್ ಯವರು ರಜಾದಮೇಲೆ ಇರುವವರಿಗೂ ತಮ್ಮ ಕೆಲಸದೊಂದಿಗೆ, ಮಾರಿಕನವೇ ಡಿವೀಜನಿನ ಚಾರ್ಜಿನಲ್ಲಿರತಕ್ಕದ್ದು.

ಹುಕುಂ ಬಮೋಜೀಬ್,
ಬರ್ನ್ಹರ್ಡ್ ಹಾಸ್, ಕ್ಯಾಪ್ಟನ್, ಆರ್. ಇ.,
ಪಬ್ಲಿಕ್ ವರ್ಕ್ಸ್, ಇಲಾಖಾ ಮೈಸೂರು ಗವರ್ನಮೆಂಟ್ ಅಂಡರ್ ಸೆಕ್ರಿಟರಿ.

ಮುಜರೈ.

ಇನ್ಸ್ತ್ರುಮೆಂಟ್ಸ್.

ತಾರೀಖು 8-23ನೆ ಮಾರ್ಚ್ 1907.

ನಂ. 4410, ಗುಬ್ಬಿ ತಾಲ್ಲೂಕು ಕಡಬದಲ್ಲಿರುವ ಶ್ರೀ ರಾಮದೇವರ ದೇವಸ್ಥಾನದ ಮೇಲ್ವಿಚಾರಣೆ ಬಗ್ಗೆ ಮೊಕರೂರಾಗಿ ಇದ್ದ ಪವತಿ ಕಡಾಂಬಿ ಗರುಡಾಚಾರ್ಯರು, ಮತ್ತು ರಾಜೇನಾಮ ಕೊಟ್ಟ ಚಿಕ್ಕ ವೆಂಕಟರಮಣ ಶೆಟ್ಟರು, ಇವರುಗಳಿಗೆ ಬದಲಾಗಿ ಈ ಕೆಳಗೆ ನಮೂದಿಸುವವರನ್ನು ಧರ್ಮದರ್ಶಿಗಳಾಗಿ ನೇಮಿಸಿ ಇದೆ.

1. ಮೆ॥ ರಾ॥ ಹುಚ್ಚೇರೆ ಗೌಡರು, ಪಟೇಲರು ಮತ್ತು ರಿಪ್ರಜಂಟೇಟಿವ ಮೆಂಬರ್.
2. ,, ಸುಬ್ರಾಯಶೆಟ್ಟರು, ಕಡಬದಪೇಟೆ ಯಜಮಾನರು.

ಹುಕುಂ ಬಮೋಜೀಬ್,
ಎಲ್. ಅನಂತನ್ಯಾಮಿರಾವ್,
ಸೆಕ್ರಿಟರಿ.